# ನಿಮ್ಮದಲ್ಲದ್ದು

■ ಕೆ.ವಿ. ರಾಜಲಕ್ಷ್ಮಿ
ಕಲೆ: ಗುರು ನಾವಳ್ಳಿ



ಮನಸ್ಸು ಗೊಂದಲದ ಗೂಡಾಗಿತ್ತು. ಕೇವಲ ನಾಲ್ಕು ದಿನಗಳ ಅವಧಿಯಲ್ಲಿ ಎಷ್ಟೆಲ್ಲ ನಡೆದಿತ್ತು. ಅದಕ್ಕೂ ಮೊದಲು ನನಗೆ ಸರಿಯಾದ ಪೆಟ್ಟು ಬಿದ್ದಿತ್ತು!

ಯಾವ ಶಾರುಖ್, ಅಮೀರನಿಗೂ ಕಮ್ಮಿಯಿಲ್ಲ, ದಿ ಮೋಸ್ಟ್ ಎಲಿಜಿಬಲ್ ಬ್ಯಾಚುಲರ್ ಎಂದೇ ನನ್ನನ್ನು ಗೆಳೆಯರು ರೇಗಿಸುತ್ತಿದ್ದರು. ವಿದ್ಯೆ, ಹುದ್ದೆ ಎಲ್ಲ ನನ್ನ ಬಯಕೆಯಂತೆಯೇ ಆಗಿತ್ತು.

ಸುಮಾರು ಮೂವತ್ತೈದು ನಲವತ್ತು ಹೆಣ್ಣುಗಳನ್ನು ನೋಡಿದ್ದರೂ ಯಾರೂ ನನ್ನ ಕಣ್ಣಿಗೆ ರತಿಯಂತೆ ಕಂಡಿರಲಿಲ್ಲ. ಕಳೆದ ಭಾನುವಾರ ಇಬ್ಬರನ್ನು ನೋಡಿಯಾಗಿತ್ತು. ಮೊದಲು ವಿಸ್ಮಯ, ಎಂ.ಎ. ಸೈಕಾಲಜಿ ಕೊನೆಯ ವರ್ಷದ ಪರೀಕ್ಷೆ ಬರೆದು ಫಲಿತಾಂಶ ಎದುರು ನೋಡುತ್ತಿದ್ದ ಹುಡುಗಿ. ಆ ನಂತರ ನೋಡಿದ್ದು ದಿಶಾ, ಸಾಫ್ಟ್‌ವೇರ್ ಎಂಜಿನಿಯರ್, ಕೈ ತುಂಬಾ ಸಂಬಳ, ಒಬ್ಬಳೇ ಮಗಳು. ಅಬ್ಬಾ! ದಿಶಾಳನ್ನು ನೋಡುತ್ತಲೇ ದಂಗಾಗಿದ್ದೆ! ಅವಳ ಸೌಂದರ್ಯ, ಬುದ್ಧಿವಂತಿಕೆ ನನ್ನನ್ನು ದುರ್ಬಲನನ್ನಾಗಿಸಿತ್ತು. ನನಗೇ ಸಾಕಷ್ಟು ಸಂಬಳ ಬರುವಾಗ ಅವಳು ನೌಕರಿ ಮಾಡದಿದ್ದರೂ ನಡೆದೀತು. 'ಮನೆಗೆ ಹೋಗಿ ತಿಳಿಸುತ್ತೇವೆ' ಎಂಬ ಮಾಮೂಲಿ ಮಾತುಗಳನ್ನು ಆಡಿ ಹೊರಬಂದಿದ್ದೆವು. ಅಮ್ಮ ಅಪ್ಪನ ಒತ್ತಾಯವಿಲ್ಲ. 'ಸಂಸಾರ ಮಾಡುವವನು ನೀನು. ಅದೂ ಅಲ್ದೆ ನಮ್ಮ ಜೊತೆ ಹಳ್ಳಿಯಲ್ಲೇನು